# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ
ಟಿ.ದಾಸರಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯ
ಮಾರಮ್ಮ ದೇವಸ್ಥಾನದ ಹತ್ತಿರ, ಬಾಗಲಗುಂಟೆ

---

ಸಂಖ್ಯೆ:ಬೃ.ಬೆಂ.ಮ.ಪಾ/ದಾ.ವ/ಸ.ಅ/ವಾ.15/ಪಿಆರ್: 28 :2022-23 ದಿನಾಂಕ: 16.07.2022

## ದಾಸರಹಳ್ಳಿ ವಾರ್ಡ್-15ರ ವಾರ್ಡ್ ಸಭೆಯ ನಡವಳಿ

ದಿ.16.07.2022 ರಂದು ಮದ್ಯಾಹ್ನ 12.30 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಶ್ರೀ.ವೆಂಕಟೇಶ್, ವಾರ್ಡ್ ಕಮಿಟ ನೊಡೆಲ್ ಆಫೀಸರ್ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ನಡೆಸಲಾಯಿತು. ಇಂದಿನ ಸಭೆಯಲ್ಲಿ ನಡೆದ ವಾರ್ಡ್ ಸಮಿತಿ ನಡವಳಿಗಳು.

**ಹಾಜರಿದ್ದವರು:**

1. ಶ್ರೀ.ವೆಂಕಟೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರರು, ವಾರ್ಡ್ ಕಮಿಟಿ ನೊಡೆಲ್ ಆಫೀಸರ್, ದಾಸರಹಳ್ಳಿ ವಾರ್ಡ್ ನಂ.15
2. ಶ್ರೀ.ವೆಂಕಟೇಶಪ್ಪ, ಕಾರ್ಯದರ್ಶಿಗಳು ಹಾಗೂ ಸಹಾಯಕ ಅಭಿಯಂತರರು, ದಾಸರಹಳ್ಳಿ ವಾರ್ಡ್ ನಂ.15
3. ಶ್ರೀ.ತನಯ್‌ಕುಮಾರ್ ಎ, ಸಹಾಯಕ ಅಭಿಯಂತರರು, ದಾಸರಹಳ್ಳಿ ವಾರ್ಡ್ ನಂ.15
4. ಶ್ರೀ.ಡಿ.ಮಂಜುನಾಥ್, ಕಾಮಗಾರಿ ಪರಿವೀಕ್ಷಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ದಾಸರಹಳ್ಳಿ
5. ಶ್ರೀ.ತಮ್ಮಣ್ಣ, ಅಧ್ಯಕ್ಷರು, ವಿನಾಯಕ ಕನ್ನಡ ಸಂಘ, ದಾಸರಹಳ್ಳಿ ವಾರ್ಡ್ ನಂ.15
6. ಶ್ರೀಮತಿ.ಚೈತ್ರ ಎಂ, ಕಿರಿಯ ಆರೋಗ್ಯ ಪರಿವೀಕ್ಷಕರು, ದಾಸರಹಳ್ಳಿ ವಾರ್ಡ್ ನಂ.15
7. ಶ್ರೀಮತಿ.ಪವಿತ್ರ ಆರ್, ಲಿಂಕ್ ವರ್ಕರ್, ದಾಸರಹಳ್ಳಿ
8. ಶ್ರೀ.ರಂಗಪ್ಪ, ಹೆಡ್ ಗ್ಯಾಂಗ್‌ಮೆನ್, ದಾಸರಹಳ್ಳಿ
9. ಶ್ರೀ.ಎಂ.ಮಹೇಶ, ನೀರು ಸರಬರಾಜು ಸಹಾಯಕ, ದಾಸರಹಳ್ಳಿ
10. ಶ್ರೀ.ತೇಜೇಶ, ಬೀದಿ ದೀಪಗಳ ನಿರ್ವಹಣೆ, ಬಿಬಿಎಂಪಿ, ದಾಸರಹಳ್ಳಿ

ನೋಡೆಲ್ ಅಧಿಕಾರಿಗಳು ವಾರ್ಡ್ ನಂ.15, ದಾಸರಹಳ್ಳಿ ರವರು ಸಭೆಯಲ್ಲಿ ಹಾಜರಿದ್ದ ವಾರ್ಡ್ ಸಭೆಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸಲು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪ್ರತೀ ವಾರ್ಡ್‌ಗೆ ನೋಡೆಲ್ ಅಧಿಕಾರಿಗಳನ್ನು ನೇಮಿಸಿ, ಸಾರ್ವಜನಿಕ ಕುಂದುಕೊರತೆ ನಿವಾರಣಾ ಸಂಬಂಧ ಪ್ರತೀ ತಿಂಗಳ ಮೊದಲ ಮತ್ತು ಮೂರನೇ ಶನಿವಾರ ಸಭೆ ಸೇರಿ ವಾರ್ಡ್‌ನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ, ಅಗತ್ಯ ಕ್ರಮವಹಿಸಲು ಸೂಚಿಸಿರುವುದಾಗಿ ತಿಳಿಸಿದರು.

### 1. ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ.

- ಘನತ್ಯಾಜ್ಯ ನಿರ್ವಹಣೆಯ ಸಂಬಂಧ ವಾರ್ಡ್‌ನಲ್ಲಿ 19 ಆಟೋಗಳು, ಒಣ ಕಸ ಸಂಗ್ರಹಣಾ ಆಟೋ-03, ಹಾಗೂ 02 ಕಾಂಪ್ಯಾಕ್ಟರ್ ವಾಹನಗಳು ಘನತ್ಯಾಜ್ಯ ವಿಲೇವಾರಿಗಾಗಿ ನಿಯೋಜಿಸಲಾಗಿರುತ್ತದೆಂದು ವಾರ್ಡ್ ಸಮಿತಿ ಸಭೆಯಲ್ಲಿ ಕಿರಿಯ ಆರೋಗ್ಯ ಪರಿವೀಕ್ಷಕರು ರವರು ತಿಳಿಸಿದರು.
- ವಾರ್ಡ್ ವ್ಯಾಪ್ತಿಯಲ್ಲಿ ಪೌರಕಾರ್ಮಿಕರು ಕಸವನ್ನು ಸರಿಯಾಗಿ ವಿಲೇವಾರಿ ಮಾಡಲಾಗುತ್ತಿಲ್ಲ ಎಂದು ವಾರ್ಡ್ ಸಮಿತಿ ಸದಸ್ಯರು ದೂರಿದರು. ಸದರಿ ದೂರಿನನ್ವಯ ತುರ್ತು ಕ್ರಮವಹಿಸಲು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ಸೂಚಿಸಲಾಯಿತು.

Scanned with CamScanner

**2.ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ.**

- ದಾಸರಹಳ್ಳಿ ವಾರ್ಡ್ ನಂ.15ರಲ್ಲಿ ಸುವಿಧ ಕ್ಯಾಂಟೀನ್ ಕಾಳಾಸ್ತಿನಗರದಲ್ಲಿ ಮಾಡುವ ಬಗ್ಗೆ ಅಥವಾ ದಾಸರಹಳ್ಳಿ ಮೆಟ್ರೋ ಸ್ಟೇಷನ್ ಹಿಂಬಾಗ ನಿರ್ಮಾಣ ಮಾಡಲು ವಾರ್ಡ್ ಕಮಿಟಿ ಸದಸ್ಯರು ಕೋರಿದರು.
- ಕಾಳಾಸ್ತಿನಗರದ ನೃಪತುಂಗ ರಸ್ತೆಯಲ್ಲಿ ರಸ್ತೆ ಡಾಂಬರೀಕರಣ ಕಾಮಗಾರಿಯನ್ನು ಪ್ರಾರಂಭಿಸಲಾಗಿರುತ್ತ ಎಂದು ವಾರ್ಡ್ ಅಭಿಯಂತರರು ತಿಳಿಸಿದರು.

**3. ಬೆಸ್ಕಾಂಗೆ ಸಂಬಂಧಿಸಿದ ಬಗ್ಗೆ.**

- ದಾಸರಹಳ್ಳಿ ವಾರ್ಡ್ ವ್ಯಾಪ್ತಿಯಲ್ಲಿ ಬೆಸ್ಕಾಂ ಇಲಾಖೆಯವರು ರಸ್ತೆಗಳನ್ನು ಅಗೆದು ಕೇಬಲ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ನಿರ್ವಹಿಸಲು ಸಾರ್ವಜನಿಕ ರಸ್ತೆಗಳನ್ನು ಅಗೆದು ಹಾಳುಮಾಡುತ್ತಿರುವುದರಿಂದ ವಾಹನ ಸಂಚಾರಕ್ಕೆ ಹಾಗೂ ಸಾರ್ವಜನಿಕ ಓಡಾಟಕ್ಕೆ ತೊಂದರೆ ಉಂಟಾಗುತ್ತಿರುವ ಬಗ್ಗೆ ಸಭೆಯಲ್ಲಿ ತಿಳಿಸಿದರು.
- ವಾರ್ಡ್‌ನ ಕೆಲವು ಭಾಗಗಳಲ್ಲಿ ಹೈ ಮಾಸ್ಕ್ ಎಲ್.ಇ.ಡಿ ಅಳವಡಿಸಲು ಹಾಗೂ ಹೊಸದಾಗಿ ಅಳವಡಿಸಿರುವ ಎಲ್.ಇ.ಡಿ ಬಲ್ಬ್‌ಗಳನ್ನು ದುರಸ್ಥಿಪಡಿಸಲು ವಾರ್ಡ್ ಕಮಿಟಿ ಸದಸ್ಯರು ಕೋರಿದರು.
- ಬೆಸ್ಕಾಂ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟ ದೂರುಗಳಿಗೆ ಕೆಲವು ತಿಂಗಳುಗಳಿಂದ ಸರಿಯಾಗಿ ಸ್ಪಂದಿಸುತ್ತಿಲ್ಲವೆಂದು ವಾರ್ಡ್ ಕಮಿಟಿ ಸದಸ್ಯರು ಸಭೆಯಲ್ಲಿ ದೂರಿದರು.

ಸದರಿ ವಿಷಯಗಳ ಬಗ್ಗೆ ತುರ್ತು ಕ್ರಮವಹಿಸಲು ಸಂಬಂಧಪಟ್ಟ ಇಲಾಖೆಯವರಿಗೆ ಸೂಚಿಸಲಾಯಿತು.

**4. ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಗೆ ಸಂಬಂಧಿಸಿದ ಬಗ್ಗೆ.**

- ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರು ಒಳಚರಂಡಿ ಹಾಗೂ ಕುಡಿಯುವ ನೀರಿನ ಸಂಪರ್ಕಕ್ಕಾಗಿ ಕಾವೇರಿ ನೀರಿನ ಸರಬರಾಜು ವ್ಯವಸ್ಥೆಯನ್ನು ಅಳವಡಿಸಲು ರಸ್ತೆಗಳನ್ನು ಅಗೆಯುತ್ತಿರುವುದರಿಂದ ವಾಹನ ಸವಾರರಿಗೆ ಹಾಗೂ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ ವಾರ್ಡ್ ಸಮಿತಿ ಸದಸ್ಯರು ಸಭೆಯಲ್ಲಿ ತಿಳಿಸಿದರು.

**5.ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ.**

ವಾರ್ಡ್ ವ್ಯಾಪ್ತಿಯಲ್ಲಿ ಕೋವಿಡ್-19 ಸಂಬಂಧಿಸಿದಂತೆ, ಆರೋಗ್ಯ ಪರಿವೀಕ್ಷಕರು ಈ ಕೆಳಕಂಡಂತೆ ಮಾಹಿತಿ ಒದಗಿಸಿದರು.

| | |
|---|---|
| ಒಟ್ಟು ಪ್ರಕರಣಗಳು | 4908 |
| ಬಿಡುಗಡೆಯಾದ ಪ್ರಕರಣಗಳು | 4901 |
| ಸಕ್ರಿಯ ಪ್ರಕರಣಗಳು | 02 |
| ಮರಣ | 91 ಇರುತ್ತದೆಂದು ಸಭೆಯಲ್ಲಿ ತಿಳಿಸಿದರು. |

**6. ಇತರೆ ವಿಷಯಗಳ ಬಗ್ಗೆ:**

- ಸಧ್ಯದ ಪರಿಸ್ಥಿತಿಯಲ್ಲಿ 12 ರಿಂದ 14 ವಯಸ್ಸಿನ ಮಕ್ಕಳಿಗೆ ಕೋವಿಡ್ ಲಸಿಕೆಯನ್ನು ನೀಡುತ್ತಿದ್ದು, ಎಲ್ಲರೂ ಸಹಕರಿಸಿ ಮಕ್ಕಳಿಗೆ ಲಸಿಕೆ ಹಾಕಿಸಲು ಮನ ಒಲಿಸಲು ಸೂಚಿಸಲಾಯಿತು.
- ವಾರ್ಡ್ ವ್ಯಾಪ್ತಿಯ ಹಲವು ಬಡಾವಣೆಗಳಲ್ಲಿ ಬೀದಿ ದೀಪಗಳ ಸಮರ್ಪಕ ನಿರ್ವಹಣೆ ಆಗದೇ ಇರುವ ಬಗ್ಗೆ ವಾರ್ಡ್ ಸದಸ್ಯರು ಸೂಚಿಸಿದ್ದು, ಅದರಂತೆ ಸಂಬಂಧಿಸಿದ ಗುತ್ತಿಗೆದಾರರಿಗೆ ಸಮರ್ಪಕವಾಗಿ ಬೀದಿ ದೀಪಗಳ ನಿರ್ವಹಣೆ ಮಾಡಲು ಸೂಚಿಸಲಾಯಿತು.

Scanned with CamScanner

➤ 60 ವಯಸ್ಸಿನ ಮೇಲ್ಪಟ್ಟವರಿಗೆ ಬೂಸ್ಟರ್ ಡೋಸ್ ಲಸಿಕೆಯನ್ನು ನೀಡಲಾಗುತ್ತಿದ್ದು, ಸಾರ್ವಜನಿಕರಿಗೆ ತಿಳಿಸುವಂತೆ ಆರೋಗ್ಯ ಇಲಾಖೆಯವರು ವಾರ್ಡ್ ಸಮಿತಿ ಸದಸ್ಯರಲ್ಲಿ ಕೋರಿದರು.

ಅಂತಿಮವಾಗಿ ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಸ್ಪಂದಿಸಿ ಬಗೆಹರಿಸಲು, ಕ್ರಮ ತೆಗೆದುಕೊಂಡ ಬಗ್ಗೆ ಎಲ್ಲಾ ಇಲಾಖೆಗಳ ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಹಾಗೂ ಮುಂದಿನ ಸಭೆಗೆ ಎಲ್ಲಾ ಇಲಾಖೆಯಿಂದ ಅಧಿಕಾರಿಗಳು ಸಭೆಗೆ ಹಾಜರಾಗಿ ಸಾಧಿಸಬೇಕಾದ ಗುರಿ ಹಾಗೂ ಸಾಧನೆ ಬಗ್ಗೆ ಚರ್ಚಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ವಂದನಾರ್ಪಣೆಯೊಂದಿಗೆ ವಾರ್ಡ್ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

**ಸದಸ್ಯ ಕಾರ್ಯದರ್ಶಿ**
**ಹಾಗೂ ಸಹಾಯಕ ಅಭಿಯಂತರರು**
**ವಾರ್ಡ್ ನಂ. 15, ದಾಸರಹಳ್ಳಿ**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ನೋಡಲ್ ಅಧಿಕಾರಿ ಹಾಗೂ**
**ವಾರ್ಡ್ ಸಮಿತಿ ಅಧ್ಯಕ್ಷರು**
**ಮತ್ತು ಕಾರ್ಯಪಾಲಕ ಅಭಿಯಂತರರು**
**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

<u>ಅಧಿಕಾರಿಗಳ ಮಾಹಿತಿಗಾಗಿ</u>

1) ಮಾನ್ಯ ವಿಶೇಷ ಆಯುಕ್ತರು, ಬಿಬಿಎಂಪಿ, ಬೆಂಗಳೂರು ರವರ ಅವಗಾಹನೆಗಾಗಿ ಮಂಡಿಸಿದೆ.
2) ಮಾನ್ಯ ಜಂಟಿ ಆಯುಕ್ತರು (ದಾಸರಹಳ್ಳಿ) ವಲಯ ರವರ ಅವಗಾಹನೆಗಾಗಿ ಮಂಡಿಸಿದೆ.
3) ಮುಖ್ಯ ಅಭಿಯಂತರರು, (ದಾಸರಹಳ್ಳಿ) ವಲಯರವರ ಅವಗಾಹನೆಗಾಗಿ ಮಂಡಿಸಿದೆ.
4) ಉಪ ನಿಯಂತ್ರಕರು (ಹಣಕಾಸು) ದಾ.ವ ರವರ ಮಾಹಿತಿಗಾಗಿ ಕಳುಹಿಸಿದೆ.
5) ಕಾರ್ಯಪಾಲಕ ಅಭಿಯಂತರರು, ದಾ.ವಿ ರವರ ಮಾಹಿತಿಗಾಗಿ ಕಳುಹಿಸಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು (ಟಿ.ದಾ.ಉ.ವಿ) ರವರ ಮಾಹಿತಿಗಾಗಿ ಕಳುಹಿಸಿದೆ
7) ಸಹಾಯಕ ಕಂದಾಯ ಅಧಿಕಾರಿ (ದಾ.ಉ.ವಿ) ಬಿಬಿಎಂಪಿ, ಬೆಂಗಳೂರು ರವರ ಮಾಹಿತಿಗಾಗಿ ಕಳುಹಿಸಿದೆ.
8) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸಲ್ಲಿಸಿದೆ
9) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಸಲ್ಲಿಸಿದೆ.
10) ಕಛೇರಿ ಪ್ರತಿ.

Scanned with CamScanner